ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 6, January - February 2025, Pp. 134-138
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸಾಮಾಜಿಕ ಸಮಾನತೆ ಸಾರಿದ ಮೊದಲ ಶಿಕ್ಷಕಿ ಸಾವಿತ್ರಿಬಾಯಿ ಪುಲೆ

ಡಾ.ಸಂಗನಗೌಡ ಶಿವನಗೌಡ[1] ಮತ್ತು ಡಾ.ವಿಜಯಲಕ್ಷ್ಮೀ ಕಟ್ಟಿ[2]
[1] ಸಹ ಪ್ರಾಧ್ಯಾಪಕರು ಸಮಾಜಶಾಸ್ತ್ರ ವಿಭಾಗ, ಸರಕಾರಿ ಪದವಿ ಮಹಾವಿದ್ಯಾಲಯ, ಸಿಂಧನೂರು
[2] ಉಪನ್ಯಾಸಕರು, ಸಮಾಜಶಾಸ್ತ್ರ ವಿಭಾಗ, ಸರಕಾರಿ ಪದವಿ ಮಹಾವಿದ್ಯಾಲಯ, ಸಿಂಧನೂರು

***Abstract:***
*ಹೂಗಾರ ಸಮುದಾಯದಲ್ಲಿ ಜನಿಸಿದ ಸಾವಿತ್ರಿಬಾಯಿ ಪುಲೆ 1831 ಜನವರಿ 3ರಂದು ಮಹಾರಾಷ್ಟ್ರದ ಸತಾರಾ ಜಿಲ್ಲೆಯ ನಾಯಗಾಂವ್ ನಲ್ಲಿ ಜನಿಸಿದರು. ಹಿಂದುಳಿದ ಸಮುದಾಯಕ್ಕೆ ಶಿಕ್ಷಣ ನಿಷೇಧವಾಗಿದ್ದ ಸಾಮಾಜಿಕ ಸಂದರ್ಭದಲ್ಲಿ ಒಂಬತ್ತು ವರ್ಷದ ಬಾಲಕಿಯಾಗಿರುವಾಗಲೇ ಜ್ಯೋತಿಬಾ ಪುಲೆ ಅವರ ಕೈಹಿಡಿದು ವೈವಾಹಿಕ ಬದುಕಿಗೆ ಕಾಲಿಟ್ಟರು. ಅಂದಿನ ಕಾಲದಲ್ಲಿ ಪುರುಷರಿಗೆ ಮಾತ್ರ ಶಿಕ್ಷಣ ಕಲಿಯುವ ಅವಕಾಶವಿದ್ದ ಸಂದರ್ಭದಲ್ಲಿ ಜ್ಯೋತಿಬಾ ಪುಲೆ ಅವರು ಸ್ವಂತ ಶ್ರಮದಿಂದ ಶಿಕ್ಷಣ ಪಡೆದರು ಮತ್ತು ತಮ್ಮ ಪತ್ನಿ ಸಾವಿತ್ರಿ ಬಾಯಿ ಅವರಿಗೂ ಅಕ್ಷರಭ್ಯಾಸ ಕಲಿಸಿದರು. ಪ್ರಸ್ತುತ ಲೇಖನದಲ್ಲಿ ಸಾವಿತ್ರಿಬಾಯಿ ಪುಲೆ ಅವರ ಸಾಮಾಜಿಕ ಸಮಾನತೆ ದೃಷ್ಟಿಕೋನ ಕುರಿತು ವಿವರಿಸಲಾಗಿದೆ.*

***Keywords:*** *ಸಾಮಾಜಿಕ ಅಸಾಮಾನತೆ, ಸಮಾನತೆ, ಶಿಕ್ಷಣ, ಸಾವಿತ್ರಿಬಾಯಿ ಪುಲೆ.*

## ಪೀಠಿಕೆ

ಸಾಮಾನ್ಯವಾಗಿ ಎಲ್ಲ ಕುಟುಂಬಗಳಲ್ಲಿ ಮದುವೆ ನಂತರ ಹೆಣ್ಣು ಮಕ್ಕಳು ಮನೆಕೆಲಸ, ಅಡುಗೆ, ಅತ್ತೆ–ಮಾವಂದಿರ ಹಾರೈಕೆ, ಮಕ್ಕಳನ್ನು ಹೆರುವುದು, ಪೋಷಿಸುವುದು ಒಟ್ಟಾರೆ ಗೃಹಬಂದಿ ಕೆಲಸಕ್ಕೆ ಮಾತ್ರ ಮಹಿಳೆಯರು ಮೀಸಲಾದ ಕಾಲದಲ್ಲಿ ವಿಪರ್ಯಾಸವೆಂಬಂತೆ ಜ್ಯೋತಿ ಬಾ ಪುಲೆ ಅವರು ತಮ್ಮ ಪತ್ನಿಯನ್ನು ಕೇವಲ ಗೃಹಕೃತ್ಯಗಳಿಗೆ ಮೀಸಲಿರಿಸದೆ ಸ್ವತಃ ತಾವೇ ಅಕ್ಷರ ಕಲಿಸಲು ಪ್ರಾರಂಭಿಸಿದರು. ಇದರಿಂದಾಗಿ ಸಾವಿತ್ರಿ ಬಾಯಿ ಪುಲೆಯವರ ಜೀವನ ಬದುಕಿನ ದಿಕ್ಕು ಬದಲಾಯಿತು.

ಹೆಣ್ಣು ಮಕ್ಕಳು ಮನೆಯ ಚೌಕಟ್ಟಿಗೆ ಸೀಮಿತವಾದ ಭಾರತೀಯ ಸಮಾಜದಲ್ಲಿ ಕ್ರಾಂತಿ ಎನ್ನುವುದು ಪುರುಷರಿಗೆ ಭೂಷಣವಾದ ಸಂಗತಿ, ಆದರೆ ಸಾವಿತ್ರಿ ಬಾಯಿ ಪುಲೆ ಹೆಣ್ಣು ಮಕ್ಕಳಿಗೆ ಅಕ್ಷರ ಕಲಿಸಲು ಮುಂದಾದರು. 1847ರಲ್ಲಿ ಸಾವಿತ್ರಿ ಬಾಯಿ ಪುಲೆರವರು ಪುಣೆಯ ಮಿಸ್ ಮಿಚಲ್ ನಾರ್ಮಲೆ ಶಾಲೆಯಲ್ಲಿ ಶಿಕ್ಷಕಿಯ ತರಬೇತಿಯನ್ನು ಪಡೆದರು. ಶ್ರೀ ಭಿಡೆಯವರ ಮನೆಯಲ್ಲಿ ಆರಂಭಗೊಂಡ ಕನ್ಯಾ ಶಾಲೆಯ ಮೊದಲ ಶಿಕ್ಷಕಿಯಾದರು ಆ ಕಾಲದಲ್ಲಿ ಹೆಣ್ಣೊಬ್ಬಳು ಶಿಕ್ಷಕಿಯಾಗುವುದು ಎಂದರೆ ಯಾರು ಮಾಡಬಾರದ ತಪ್ಪು ಎಂದೇ ಜನರು ಭಾವಿಸುತ್ತಿದ್ದ ಕಾಲಾ ಅದಾಗಿತ್ತು. ಹಾಗೆಯೇ ಹೆಣ್ಣಿಗೆ ಯಾಕೆ ಶಿಕ್ಷಣ ಅವಳು ಓದಲು ಬರೆಯಲು ಕಲಿತರೆ ಪುರುಷರ ಅಧೀನದಲ್ಲಿರದೇ ಅಹಂಕಾರಿಯಾಗುತ್ತಾಳೆ ಹಾಗಾಗಿ ಮಹಿಳೆಯರು ಪುರುಷರ ಗುಲಾಮರಂತೆ ಮನೆಗೆಲಸ

***Please cite this article as:*** ಸಂಗನಗೌಡ ಶಿವನಗೌಡ ಮತ್ತು ವಿಜಯಲಕ್ಷ್ಮೀ ಕಟ್ಟಿ. (2025). ಸಾಮಾಜಿಕ ಸಮಾನತೆ ಸಾರಿದ ಮೊದಲ ಶಿಕ್ಷಕಿ ಸಾವಿತ್ರಿಬಾಯಿ ಪುಲೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(6), 134–138

ಮಾಡುವ ದಾಸಿಯಾಗಿ, ಪುರುಷರಿಗೆ ದೈಹಿಕ ಸುಖಕೊಡುವುದಕ್ಕೆ, ಮಕ್ಕಳನ್ನು ಹೆರುವ ಯಂತ್ರ ಮಾತ್ರ ಎಂದು ಭಾವಿಸಿದ್ದ ಕಾಲದಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣ ಕಲಿಸಬೇಕೆಂದು ಶಾಲೆಗೆ ಹೋಗುತ್ತಿದ್ದ ಸಾವಿತ್ರಿಬಾಯಿ ಅವರಿಗೆ ದಾರಿಯಲ್ಲಿ ಅವರನ್ನು ತಡೆದು ಕೆಸರು ನೀರು ಎರಚಿ ಅವಮಾನಿಸುತ್ತಿದ್ದರು. ಆದರೂ ಇವರು ಯಾವುದಕ್ಕೂ ಎದೆಗುಂದದೆ, ಧೈರ್ಯ ಕಳೆದು ಕೊಳ್ಳದೇ ಹೆಣ್ಣು ಮಕ್ಕಳಿಗೆ ಪಾಠ ಕಲಿಸಲು ಮುಂದಾದರು. ಇಂತಹ ಅವಮಾನಗಳು ದಿನ ದಿನವು ಹೆಚ್ಚುತ್ತಾ ನಡೆದರೂ ಸಾವಿತ್ರಿ ಬಾಯಿಯವರು ಅದಕ್ಕೆಂದೆ ತಾವು ಶಾಲೆಗೆ ತೆಗೆದು ಕೊಂಡು ಬರುತ್ತಿದ್ದ ಕೈ ಚೀಲದಲ್ಲಿ ಇನ್ನೊಂದು ಸೀರೆಯನ್ನು ಮರೆಯದೆ ತರುತ್ತಿದ್ದರು. ಕೆಸರು ತಾಗಿ ಒದ್ದೆಯಾಗಿದ್ದ ಸೀರೆಯನ್ನು ಬದಲಿಸಿ ಬೇರೆ ಸೀರೆಯನ್ನು ಉಟ್ಟು ಮಕ್ಕಳಿಗೆ ಪಾಠ ಮಾಡಲು ಅಣಿಯಾಗುತ್ತಿದ್ದರು. ಯಾರು ಎಷ್ಟೇ ಅವಮಾನಿಸಿದರೂ, ವಿರೋಧಿಸಿದರೂ ಎದೆಗುಂದದಿದ್ದಾಗ ಕೊನೆಗೆ ಕೊಲೆಯ ಸಂಚು ಹೂಡಿದರು. ಆದರೂ ಸಾವಿತ್ರಿ ಬಾಯಿಯವರು ತಾವು ತಳೆದಿದ್ದ ನಿರ್ಧಾರದಿಂದ ಒಂದಿಂಚು ಹಿಂದೆ ಸರಿಯಲಿಲ್ಲ. ಯಾವ ಗೊಡ್ಡು ಬೆದರಿಕೆಗಳಿಗೂ ಕಿವಿಗೊಡದೆ ಬದಲಾಗಿ ಸಾವಿತ್ರಿಬಾಯಿ ಮತ್ತು ಜ್ಯೋತಿ ಬಾ ಪುಲೆ ಇಬ್ಬರೂ ಸೇರಿ 1848 ರಿಂದ 1852ರ ಅವಧಿಯಲ್ಲಿ ಸುಮಾರು 18 ಶಾಲೆಗಳನ್ನು ತೆರೆದರು. ಈ ಶಾಲೆಗಳ ಒಟ್ಟಾರೆ ಜವಾಬ್ದಾರಿಯನ್ನು ಸ್ವತಃ ಸಾವಿತ್ರಿ ಬಾಯಿ ಅವರೆ ವಹಿಸಿಕೊಂಡರು. ಸಮಾಜದಲ್ಲಿದ್ದ ವರ್ಣವ್ಯವಸ್ಥೆ ಕೇವಲ ಅಕ್ಷರ ಸಂಸ್ಕೃತಿಯನ್ನು ಒಂದು ಸಮುದಾಯ ಮಾತ್ರ ಗುತ್ತಿಗೆ ಹಿಡಿದಂತೆ ವರ್ತಿಸುತ್ತಿದ್ದ ಕಾಲದಲ್ಲಿ, ಈ ನೆಲದ ಮಹಿಳೆಯರು, ಶೋಷಿತರು, ಅಸ್ಪೃಶ್ಯರು ಶಿಕ್ಷಣದಿಂದ ವಂಚಿತರಾಗಬಾರದೆಂಬ ನಿಲುವನ್ನು ಹೊಂದಿದ್ದರು. ಹಾಗಾಗಿ ಶಿಕ್ಷಣ ಕ್ರಾಂತಿಗೆ ಪ್ರೇರಣೆ ನೀಡಿದ್ದಾರೆ.

ಕಲಿಸುವ ದಾರಿ ಸಾವಿತ್ರಿಯವರಿಗೆ ಸುಲಭದ್ದೇನು ಆಗಿರಲಿಲ್ಲ ದಂಪತಿಗಳಿಬ್ಬರು ಸಮಾಜದ ಕೆಂಗೆಣ್ಣಿಗೆ ಗುರಿಯಾಗಿ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗಬೇಕಾಯಿತು. ಇಂತಹ ಸಂದರ್ಭದಲ್ಲಿ ಜ್ಯೋತಿ ಬಾ ಪುಲೆ ಅವರ ತಂದೆ; ಮಗ ಮತ್ತು ಸೊಸೆಯನ್ನು ಮನೆಯಿಂದ ಹೊರಹಾಕಿದರು. ಈ ಬಹಿಷ್ಕಾರವು ದಂಪತಿಗಳಲ್ಲಿ ಶಿಕ್ಷಣ ಕಲಿಸುವ ಕೆಲಸವನ್ನು ಮತ್ತಷ್ಟು ಚುರುಕಾಗಿಸಿತು. ಮುಟ್ಟಬೇಕಿದ್ದ ಗುರಿಯಷ್ಟೇ ಮುಖ್ಯವಾಗಿದ್ದಾಗ ದಾರಿಯಲ್ಲಿನ ಕೊಳಕು ಹೇಗೆ ಇವರನ್ನು ತಡೆದಿತು, ಸಾವಿತ್ರಿಬಾಯಿ ಅವರ ಪಾಲಿಗೆ ಇಡೀ ಸಮಾಜವೇ ಪ್ರಯೋಗ ಶಾಲೆಯಾಗಿತ್ತು. ಅಂತರ ಜಾತಿ ವಿವಾಹ, ವಿಧವಾ ವಿವಾಹ, ಶಿಶುಪಾಲನಾ ಗೃಹಗಳ ಸ್ಥಾಪನೆ ಇವೆಲ್ಲವೂ ಅವರಿಗೆ ಅವಶ್ಯವಾಗಿದ್ದವು.

1848ರಲ್ಲಿ ಕೆಳಜಾತಿಯ ಹೆಣ್ಣುಮಕ್ಕಳ ಶಾಲೆಯನ್ನು ಪ್ರಾರಂಭಿಸುತ್ತಾರೆ. ಸಂಪ್ರದಾಯ ವಾದಿಗಳಿಂದ ಈ ಶಾಲೆ ಬಹುಬೇಗ ಮುಚ್ಚಿ ಹೋಗುತ್ತದೆ. ಮರಳಿ ಯತ್ನ ಮಾಡು ಎಂಬಂತೆ ಬುಧವಾರ ಪೇಟೆಯಲ್ಲಿರುವ ಬೀಡೆ ಎಂಬುವವರ ಮನೆಯಲ್ಲಿ ಶಾಲೆಯನ್ನು ತೆರೆಯುತ್ತಾರೆ. ಸಾವಿತ್ರಿಬಾಯಿ ಪುಲೆ ಅವರ ಕನಸಿಗೆ ಪುಷ್ಟಿ ನೀಡುವಂತೆ ಫಾತೀಮಾಳು ಕೂಡ ಶಿಕ್ಷಕ ವೃತ್ತಿಯನ್ನು ಸಾವಿತ್ರಿಬಾಯಿ ಅವರ ಜೊತೆಗೂಡಿ ಕೆಲಸದಲ್ಲಿ ತೊಡಗಿ ಕೊಂಡರು. ಶಾಲೆಯ ಅಭಿವೃದ್ಧಿಗಾಗಿ ಹಗಲಿರುಳು ದುಡಿದು ಶೈಕ್ಷಣಿಕವಾಗಿ ಉತ್ತಮ ಪ್ರಗತಿಯನ್ನು ಸಾಧಿಸಲು ಸಫಲತೆ ಪಡೆಯಿತು. ಆ ಶಾಲೆಗೆ ಬರುವವರೆಲ್ಲರು ಕಡು ಬಡತನದ ಹೆಣ್ಣು ಮಕ್ಕಳು, ಶೂದ್ರರು, ದಮನಿತರು ಇಂತಹ ಪರಿಸ್ಥಿತಿಯಲ್ಲಿ ಶಾಲೆಗೆ ದುಡ್ಡು ಖರ್ಚು ಮಾಡುವುದು ದೊಡ್ಡ ಸವಾಲಾಗಿತ್ತು. ಅದನ್ನು ಅರಿತ ಪುಲೆ ದಂಪತಿಗಳು ಹೆಣ್ಣು ಮಕ್ಕಳಿಗೆ ಊಟ, ಸಮವಸ್ತ್ರ, ಆಟಕ್ಕೆ ಬೇಕಾದ ಸಾಮಗ್ರಿಗಳ ವ್ಯವಸ್ಥೆಯನ್ನು ಮಾಡಿದರು ಅಲ್ಲದೆ ಮಕ್ಕಳನ್ನು ಮನೆಯಿಂದ ಶಾಲೆಗೆ ಕರೆದುಕೊಂಡು ಬರಲು ಮತ್ತು ಮರಳಿ ಮನೆಗೆ ಕಳಿಸಲು ಸರಿಯಾದ ವ್ಯವಸ್ಥೆಯನ್ನು ಮಾಡಿದರು. ಇದರಿಂದ ಅದೆಷ್ಟೋ ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು

ಕಲಿಯಲು ಸಹಾಯವಾಯಿತು. ಸಾವಿತ್ರಿಬಾಯಿ – ಯವರು ಸ್ತ್ರೀಯರ ಸುಧಾರಣೆಗಾಗಿ ಜ್ಯೋತಿ ಬಾ ಪುಲೆಯವರ ಮಾರ್ಗದರ್ಶನದಲ್ಲಿ 'ಮಹಿಳಾ ಸೇವಾ ಮಂಡಳ'ವನ್ನು ಸ್ಥಾಪನೆ ಮಾಡುತ್ತಾರೆ. ಪುಣೆಯ ಕಲೆಕ್ಟರ್ ಅವರ ಪತ್ನಿ ಇ.ಸಿ ಜೋನ್ಸ್ ಎಂಬುವವರು ಮಹಿಳಾ ಸೇವಾ ಮಂಡಳ ಸಂಸ್ಥೆಯ ಅಧ್ಯಕ್ಷರಾಗುತ್ತಾರೆ. ಮಹಿಳೆಯರನ್ನು ಒಟ್ಟುಗೂಡಿಸಲು 1852ರಲ್ಲಿ ದೊಡ್ಡ ಪ್ರಮಾಣದ ಎಳ್ಳುಬೆಲ್ಲ ಹಂಚುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಎಲ್ಲಾ ಹೆಣ್ಣುಮಕ್ಕಳಿಗೆ ಕುಂಕುಮವನ್ನು ವಿತರಿಸಿ ಅವರಿಗೆಲ್ಲಾ ಉಡಿ ತುಂಬುತ್ತಾರೆ. 1871ರಲ್ಲಿ 'ಸ್ತ್ರೀ ವಿಚಾರವತಿ' ಸಭಾ ಸ್ಥಾಪನೆ ಮಾಡುತ್ತಾರೆ.

ಆ ಕಾಲದಲ್ಲಿ ಬ್ರಾಹ್ಮಣ ಹೆಣ್ಣು ಮಕ್ಕಳಿಗೆ ಹೆಚ್ಚಿನ ತೊಂದರೆಯಿತ್ತು, ವಿಧವೆಯರಾದ ಅನೇಕ ಬ್ರಾಹ್ಮಣ ಮನೆತನದ ಹೆಣ್ಣುಮಕ್ಕಳಿಗೆ ಅವರ ಮನೆಯಮಾವ, ಮೈದುನ ಮುಂತಾದವರಿಂದ ಬಲತ್ಕಾರಕ್ಕೆ ಒಳಗಾಗುತ್ತಿದ್ದರು. ಇದರ ಪರಿಣಾಮವಾಗಿ ಅವರಿಗೆ ಮಕ್ಕಳಾದರೆ 'ಬಾಲಹತ್ಯೆ' ಮಾಡುತ್ತಿದ್ದರು ಇಲ್ಲವೆ ಗರ್ಭವತಿಯಾದರೆ ಸ್ವತ: ಅವರೇ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು. ಇಂತಹ ಆಚರಣೆಯನ್ನು ತಡೆಗಟ್ಟುವ ಉದ್ದೇಶದಿಂದ 'ಬಾಲಹತ್ಯೆ ಪ್ರತಿಬಂಧಕ ಗೃಹ' ಸ್ಥಾಪಿಸಿದರು. ಯೌವ್ವನಾವಸ್ಥೆಯಲ್ಲಿರುವ ಬ್ರಾಹ್ಮಣ ವಿಧವೆಯರಿಗೆ ಈ ಪ್ರತಿಬಂಧಕ ಗೃಹ ಬಹಳ ಆಸರೆ ಆಗಿತ್ತು. ಪುಲೆ ದಂಪತಿಗೆ ಮಕ್ಕಳಿರಲಿಲ್ಲ ಎನ್ನುವದಕ್ಕಿಂತಲೂ ಅಸಹಾಯಕ ಸಮುದಾಯವನ್ನೆ ತಮ್ಮ ಮಕ್ಕಳೆಂದು ಭಾವಿಸಿದ್ದ ಅವರಿಗೆ 1863ರಲ್ಲಿ ಸ್ವತಃ ಮನೆಯಲ್ಲಿ ಸ್ಥಾಪಿಸಿದ ಅನಾಥ ಬಾಲಾಶ್ರಮದಲ್ಲಿ 35 ಹೆಣ್ಣುಮಕ್ಕಳಿಗೆ ಬಾಣಂತನವನ್ನು ಮಾಡಿದರು.

1873ರಲ್ಲಿ ಕಾಸಿಬಾಯಿ ಎಂಬ ಬ್ರಾಹ್ಮಣ ವಿಧವೆಗೆ ಜನಿಸಿದ ಮಗುವನ್ನು ದತ್ತು ಪಡೆದರು. ಮಹಿಳೆರಿಗಾಗಿ ವಿಧವೆಯರಿಗಾಗಿ ಪುನರ್ ವಸತಿ, ವಿಧವಾ ಅನಾಥಶ್ರಮವನ್ನು ಕೂಡ ಸ್ಥಾಪಿಸುತ್ತಾರೆ. ಪುಲೆ ದಂಪತಿಗಳಿಂದ ಸ್ಥಾಪಿಸಿದ ವಿಧವಾ ಅನಾಥಾಲಯವು ದೇಶದಲ್ಲಿಯೇ ಸ್ಥಾಪಿಸಿದ ಪ್ರಥಮ ಸಾಮಾಜಿಕ ಸಂಸ್ಥೆಯಾಗಿದೆ. 1848ರಲ್ಲಿ ತಮ್ಮ ನೀರಿನ ಬಾವಿಯನ್ನು ಕೆಳಜಾತಿಯವರಿಗೆ ಬಿಟ್ಟುಕೊಡುತ್ತಾರೆ. ಇದರಿಂದ ಎಷ್ಟೋ ಕೆಳವರ್ಗದವರಿಗೆ ನೀರಿನ ಅನುಕೂಲತೆ ಸಿಗುತ್ತದೆ ಇದರ ಒಟ್ಟಿಗೆ ವಯಸ್ಕ ರೈತರು ಮತ್ತು ದುಡಿಯುವವರಿಗಾಗಿ ರಾತ್ರಿ ಶಾಲೆಯನ್ನು ತಮ್ಮ ಮನೆಯಲ್ಲಿ ಪ್ರಾರಂಭಿಸಿದರು.

ಹೋಗಿ ಶಿಕ್ಷಣ ಪಡೆಯಿರಿ ಸ್ವಾವಲಂಬಿಗಳಾಗಿರಿ ಶ್ರಮಶೀಲರಾಗಿ ಕೆಲಸಮಾಡಿ ಬುದ್ದಿವಂತಿಕೆ ಮತ್ತು ಸಂಪತ್ತನ್ನು ಸಂಗ್ರಹಿಸಿ ಜ್ಞಾನವಿಲ್ಲದೆ ಎಲ್ಲವೂ ಕಳೆದು ಹೋಗುತ್ತವೆ ಇನ್ನು ಸುಮ್ಮನೆ ಕುಳಿತುಕೊಳ್ಳಬೇಡಿ ಶಿಕ್ಷಣ ಪಡೆದುಕೊಳ್ಳಿ ತುಳಿತಕ್ಕೊಳಗಾದ ಮತ್ತು ತ್ಯಜಿಸಲ್ಪಟ್ಟವರ ದುಃಖವನ್ನು ಕೊನೆಗೊಳಿಸಿ ಕಲಿಯಲು ನಿಮಗೆ ಸುವರ್ಣಾವಕಾಶವಿದೆ ಮತ್ತು ಜಾತಿಯ ಸರಪಳಿಯನ್ನು ಮುರಿಯಿರಿ ಎಂದು ಕಾವ್ಯದ ಮೂಲಕ ದಮನಿತರಲ್ಲಿ ಜಾಗೃತಿ ಮೂಡಿಸುತ್ತಾ ದಾಸ್ಯದ ಕೊಂಡಿ ಮುರಿದು ಸ್ವಾಭಿಮಾನದ ಬಾಳು ಬಾಳಲು ಅಕ್ಷರವಂತರಾಗಿ ನಿಮ್ಮ ಮುಂದೆ ಇರುವ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳಿ ಎಂದು ಹೇಳುತ್ತಾ ಸರ್ವರಿಗೂ ಶಿಕ್ಷಣ, ಸರ್ವರಿಗೂ ಉದ್ಯೋಗ, ಸರ್ವರಿಗೂ ಸಮಾನ ಹಕ್ಕು ಎಂಬ ಪರಿಕಲ್ಪನೆಯು ಮತ್ತೆ ಜೀವತಾಳಿತು. ಆ ಮೂಲಕವಾಗಿ ಅಮೋಘವಾದ ಕ್ರಾಂತಿಯನ್ನು ಶೂದ್ರ ಬದುಕಿನಲ್ಲಿ ತರುತ್ತಾರೆ.

19ನೇ ಶತಮಾನದ ಹಲವು ಸಮಾಜ ಸುಧಾರಕರು ಹಿಂದೂ ಸಮಾಜದಲ್ಲಿನ ಕೆಲವು ಮೂಢನಂಬಿಕೆಗಳ ವಿರುದ್ಧ ಹೋರಾಡಿದರು. ಆದರೆ ಇವರು ಯಾರು ಹಿಂದೂ ಧರ್ಮದ ಚೌಕಟ್ಟಿನಲ್ಲಿರುವ ವರ್ಣವ್ಯವಸ್ಥೆಯ ಸಂಕರವನ್ನು ಮತ್ತು ಜಾತಿ ಪದ್ಧತಿಯನ್ನು ಕಿತ್ತು ಹಾಕುವ ಪ್ರಯತ್ನಗಳನ್ನು ಮಾಡಲಿಲ್ಲ ಯಥಾಸ್ಥಿತಿವಾದವನ್ನು ಪ್ರತಿಪಾದಿಸಿದ ಇವರು ಕೇವಲ ಮೇಲುಮಟ್ಟದ ಸುಧಾರಣೆಗಳನ್ನು ಬಯಸಿದರು ಆದರೆ ಪುಲೆ

ದಂಪತಿಗಳು ಬ್ರಾಹ್ಮಣ್ಯದ ಧಾರ್ಮಿಕ–ಸಾಮಾಜಿಕ ವ್ಯವಸ್ಥೆ ಕಳಂಕಿತವಾದದ್ದು ಮತ್ತು ಹೆಚ್ಚು ಅಪಾಯಕಾರಿಯಾದದ್ದು ಜಾತಿಪದ್ಧತಿ ಎಂಬ ಮೂಲಭೂತ ವ್ಯವಸ್ಥೆಯಂತಹ ರೋಗಕ್ಕೆ ಶಿಕ್ಷಣವೇ ತಕ್ಕ ಔಷಧಿಯೆಂದು ತಿಳಿಸಿದರು. 'ಕೀವುಗಟ್ಟಿದಂತಹ ಗಾಯದ ಕಲೆಯಾಗಿದ್ದ ಜಾತಿಯನ್ನು ಕಡೆಗೂ ನನ್ನ ಬದುಕಿನಿಂದ ಅಳಿಸಿ ಹಾಕಿದ್ದೇನೆ' ಎನ್ನುವಂತಹ ಕವನದ ಸಾಲುಗಳನ್ನು ಬರೆದ ಸಾವಿತ್ರಿಬಾಯಿ ಬ್ರಾಹ್ಮಣ್ಯದ ಶಾಸ್ತ್ರಗಳನ್ನು ಕಿತ್ತು ಎಸೆದಾಕು ಎಂದು ತಮ್ಮ 'ಕಾವ್ಯ ಅರಳಿದೆ' ಸಂಕಲನದಲ್ಲಿ ತಿಳಿಸಿದರು. ಶಿಕ್ಷಣದ ಮೂಲಕ ತಳಸಮುದಾಯಗಳ ಬದುಕಿನಲ್ಲಿ ಸುಧಾರಣೆಗಳಿಗೆ ಕಾರಣರಾದ ಪುಲೆ ದಂಪತಿಗಳು ವಿಶ್ವಭ್ರಾತೃತ್ವ, ಮಕ್ಕಳ ಸೂಕ್ಷ್ಮತೆ ಬೌದ್ಧಿಕವಾಗಿ ಹೆಚ್ಚು ವಸ್ತುನಿಷ್ಠವಾದ ಮತ್ತು ಸಾಮಾಜಿಕ ಸುಧಾರಣೆಯಂತಹಗಂಭೀರ ವಿಷಯಗಳ ಬಗ್ಗೆ ಆಸಕ್ತಿ ವಯಿಸಿದ್ದು ಶಿಕ್ಷಣದಲ್ಲಿ ಅದನ್ನು ಅಳವಡಿಸಿದರು. 19ನೇ ಶತಮಾನದ ಮೊದಲು ಹಾಗೂ ಮಧ್ಯಭಾಗದಲ್ಲಿ ಅಂದಿನ ಶಿಕ್ಷಣ ನೀತಿಯಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ತರಲು ಬಯಸಿದ್ದ ಸಾವಿತ್ರಿಬಾಯಿ ಆಗಿನ ಶಿಕ್ಷಣ ವ್ಯವಸ್ಥೆಯ ದೃಷ್ಟಿಕೋನವನ್ನು ಪಲ್ಲಟಗೊಳಿಸಿದದರು.

1851ರ ವೇಳೆಗೆ 500 ಬಾಲಕಿಯರನ್ನೊಳಗೊಂಡಂತಹ 3 ಬಾಲಕಿಯರ ಶಾಲೆಗಳನ್ನು ನಡೆಸುತ್ತಾರೆ. ಇಂದು 'ಸರ್ವ ಶಿಕ್ಷಣ ಅಭಿಯಾನ', 'ಶಿಕ್ಷಣ ಹಕ್ಕು ಕಾಯ್ದೆ', ಬಿಸಿಯೂಟದ ಸರಕಾರಿ ಯೋಜನೆಗಳು ಶಿಕ್ಷಣದ ಅಭಿವೃದ್ಧಿಗೆಪೂರಕವಾಗಿವೆ ಎಂದು ಹೇಳುವ ಈ ಸಂದರ್ಭದಲ್ಲಿ 160 ವರ್ಷಕ್ಕೂ ಹಿಂದೆ ಸಾವಿತ್ರಿ ಬಾಯಿಯವರು ಶಾಲೆಯನ್ನು ತೊರೆಯುವ ವಿದ್ಯಾರ್ಥಿಗಳಿಗೆ ಸ್ಟೈಪಂಡ್ ಕೊಡುವ ಯೋಜನೆ ತಂದಿದ್ದರು. ಸ್ಪರ್ಧೆಗಳಲ್ಲಿ ಗೆಲ್ಲುತ್ತಿದ್ದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ಸ್ವೀಕರಿಸುವುದರ ಬದಲಾಗಿ ತಮ್ಮ ಶಾಲೆಗಳಿಗೆ ಪುಸ್ತಕಗಳನ್ನು ಕೊಡಲಿಕ್ಕೆ ಕೇಳಿರೆಂದು ಹೇಳುತ್ತಿದ್ದರು. ಇವರ ಈ ಶಿಕ್ಷಣದ ಯಶಸ್ಸು ಎಷ್ಟಿತ್ತೆಂದರೆ ಇವರ ವಿದ್ಯಾರ್ಥಿನಿ 11 ವರ್ಷದ ಮುಕ್ತಬಾಯಿ ಬರೆದ 'ಮಹರ್ ಮಾಂಗ್' ಸಮುದಾಯದ ದುಃಖ ದುಮ್ಮಾನಗಳು ಎನ್ನುವ ಕ್ರಾಂತಿಕಾರಿ ಪ್ರಬಂಧವೇ ಸಾಕ್ಷಿ.

ಸಾವಿತ್ರಿಬಾಯಿಯವರು 1868ರಲ್ಲಿ ಬರಗಾಲದ ಸಂದರ್ಭದಲ್ಲಿ ತಮ್ಮ ಮನೆಯ ನೀರಿನ ತೊಟ್ಟಿಗಳನ್ನು ದಲಿತರಿಗೆ ಉಪಯೋಗಿಸಲು ಬಿಟ್ಟುಕೊಟ್ಟರು. 1877ರಲ್ಲಿ ಮಹಾರಾಷ್ಟ್ರದ ಭಾಗಗಳು ಕ್ಷಾಮದಿಂದ ತತ್ತರಿಸುತ್ತಿದ್ದವು. ಪುಲೆ ದಂಪತಿಗಳು ವಿಕ್ಟೋರಿಯ ಬಾಲಾಶ್ರಮವನ್ನು ಸ್ಥಾಪಿಸಿ ಸ್ನೇಹಿತರು ಮತ್ತು ದಾನಿಗಳಿಂದ ನೆರವನ್ನು ಸಂಗ್ರಹಿಸಿ ಪ್ರತಿಯೊಂದು ಹಳ್ಳಿಗೆ ತೆರಳಿ ನೆರವಿಗೆ ದಾವಿಸುತ್ತಿದ್ದರು. ನಿರಂತರ ಹೋರಾಟದಿಂದ 73 ವರ್ಷದ ಮಹಾತ್ಮಜ್ಯೋತಿ ಬಾ ಪುಲೆಯವರು ದೀರ್ಘ ಅನಾರೋಗ್ಯದಿಂದ 1890 ನವೆಂಬರ್ 28 ರಂದು ನಿಧನರಾದರು. ಮಕ್ಕಳಾಗದ ದಂಪತಿಗಳಾಗಿದ್ದರಿಂದ ದತ್ತು ಪುತ್ರ ಯಶವಂತನಿಂದ ಅಂತ್ಯಸಂಸ್ಕಾರ ಮಾಡಿಸಲು ಕುಟುಂಬದವರು ಒಪ್ಪದಿದ್ದಾಗ ಸ್ವತಃ ಕೈಯಲ್ಲಿ ದಿವಟಿಯನ್ನು ಹಿಡಿದು ಜ್ಯೋತಿಬಾ ಪುಲೆಯವರ ಅಂತ್ಯಸಂಸ್ಕಾರ ಮಾಡಿದ ದಿಟ್ಟ ಮಹಿಳೆ ಸಾವಿತ್ರಿ ಬಾಯಿ ಪುಲೆ. ಭಾರತದ ಮೊದಲ ಮಹಿಳಾ ಶಿಕ್ಷಕಿ ಹಾಗೂ ಅಪ್ಪಟ ಸ್ತ್ರೀವಾದದ ಚಿಂತಕಿ ಮಾತೆ ಸಾವಿತ್ರಿ ಬಾಯಿ ಪುಲೆ ಅವರಿಗೆ ಮಹಿಳೆಯರ ಬಗ್ಗೆ ಇದ್ದ ಕಾಳಜಿ ಮತ್ತು ಪ್ರೇಮ ಅವರ ಬದುಕು ಬರಹಗಳಲ್ಲಿ ಕಾಣಸಿಗುತ್ತದೆ. ಅದರಲ್ಲೂ ಶೂದ್ರಾತಿಶೂದ್ರ ಬಹುಸಂಖ್ಯಾತರಿಗೆ ಹಾಗೂ ಭಾರತದ ಹೆಣ್ಣುಮಕ್ಕಳಿಗೆ ವಿದ್ಯೆ ಕಲಿಸಲು ತನ್ನ ಇಡಿ ಜೀವನವನ್ನೇ ಮುಡುಪಾಗಿಟ್ಟು ಅಕ್ಷರ ಬೀಜವನ್ನು ಬಿತ್ತಿಕ್ರಾಂತಿಯನ್ನು ಹುಟ್ಟುಹಾಕಿದ ದಿಟ್ಟ ಮಹಿಳೆ ಸಾವಿತ್ರಿಬಾಯಿ ಪುಲೆಯವರು. ಇದರ ಒಟ್ಟಿಗೆ ಬಾಲಹತ್ಯೆ ಪ್ರತಿಬಂಧಕ, ವಿಧವಾ ಅನಾಥಶ್ರಮ ಕೂಲಿಕಾರ ರೈತರಿಗಾಗಿ ರಾತ್ರಿಶಾಲೆ, ಬಡವರಿಗಾಗಿ ಅನ್ನ ಛತ್ರಗಳನ್ನು ತೆರೆದರು. ಬ್ರಾಹ್ಮಣ ವಿಧವೆಯರಿಗೆ ಕೇಶಮಂಡನೆ ಮಾಡುವುದನ್ನು ವಿರೋಧಿಸಿದರು. ದೇವದಾಸಿ ಪದ್ಧತಿ ನಿರ್ಮೂಲನೆ ಮಾಡುವ

ಪ್ರಯತ್ನದಲ್ಲಿ ತೊಡಗಿದರು. ಸಮಾಜದ ಎಲ್ಲಾ ಅನಿಷ್ಟಗಳಿಗೂ ಕಾರಣವಾದ ಜಾತಿ ಪದ್ಧತಿ ಅಳಿಯಬೇಕೆಂದು ಚಾಲ್ತಿಯಲ್ಲಿದ್ದ ಬಹುಪಾಲು ವ್ಯವಸ್ಥೆ ಆಚರಣೆ ನಂಬಿಕೆಗಳಿಗೆ ಸವಾಲು ಎಸೆದರು.' ಶಿಕ್ಷಣ ಎಲ್ಲರ ಹಕ್ಕು' ಎಂದು ಸಾರಿ ಶಾಲೆಯನ್ನು ತೆರೆದರು ಪುರೋಹಿತರಿಲ್ಲದೆ ಮದುವೆ ಮಾಡಿಸಿದರು. ಬಹುಪತ್ನಿತ್ವವನ್ನು ವಿರೋಧಿಸಿದರು ವಿಧವೆಯರ ಮಾನವ ಹಕ್ಕುಗಳನ್ನು ಎತ್ತಿ ಹಿಡಿದು ಮರು ವಿವಾಹವನ್ನು ಪ್ರತಿಪಾದಿಸಿದರು. ಈ ನಿಟ್ಟಿನಲ್ಲಿ ಸತ್ಯಶೋಧಕ ಸಮಾಜವನ್ನು ಪ್ರಾರಂಭಿಸಿದರು.

ಎಲ್ಲಾ ಧರ್ಮಗಳ ಶಾಸ್ತ್ರ ಪುರಾಣ ಗ್ರಂಥಗಳನ್ನು ನಿರಾಕರಿಸಿ ಸಾರ್ವಜನಿಕ ಸತ್ಯಧರ್ಮ ಪ್ರತಿಪಾದಿಸಿ ಹೊಸ ಹೊಸ ಗ್ರಂಥಗಳನ್ನು ರಚಿಸಿ ಓದುಗರ ಮನಸ್ಸುಗಳನ್ನು ಸೂರೆಗೊಂಡ ಮಹಾನ್ ಕ್ರಾಂತಿಕಾರಿ ತಾಯಿಯಾಗಿ ನಮಗೆಲ್ಲ ಮಾರ್ಗದಾತೆಯಾದವರು. ಶಿಕ್ಷಕಿಯಾಗಿ ಮುಖ್ಯೋಪಾಧ್ಯಾಯನಿಯಾಗಿ ಶಾಲಾ ಸಂಚಾಲಕಿಯಾಗಿ ಹೀಗೆ ವಹಿಸಿಕೊಂಡ ಎಲ್ಲಾ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿಭಾಯಿಸಿ ತಮ್ಮ ಪತಿಯಿಂದಲೇ ಸೈಯೆನಿಸಿ ಕೊಂಡರು ಈ ರೀತಿಯ ನೂರಾರು ಸಮಾಜ ಮುಖಿ ಕಾರ್ಯಗಳ ಮೂಲಕ ಸರ್ವಸ್ಥರ ಹಾಗೂ ಸಮಾಜದ ಕಣ್ಮಣಿಯಾದರು. ಮಹಿಳೆಯರು ಕೂಡ ಪುರುಷರಂತೆ ಶಿಕ್ಷಣವನ್ನು ಪಡೆಯಬೇಕೆಂಬ ಸದುದ್ದೇಶದಿಂದ ತಮಗೆ ಎದುರಾದ ಕಷ್ಟ ನಷ್ಟಗಳನ್ನು ಲೆಕ್ಕಿಸಿದೆ ಸ್ತ್ರೀಯರ ಸಬಲೀಕರಣಕ್ಕಾಗಿ ಹಾಗೂ ಅವರ ಶಿಕ್ಷಣಕ್ಕಾಗಿ ಹಗಲು ರಾತ್ರಿಯೆನ್ನದೆ ಶ್ರಮಿಸಿ ಮಹಾಮಾತೆ ಎನಿಸಿಕೊಂಡರು. ಮಹಿಳೆಯರ ಶಿಕ್ಷಣಕ್ಕಾಗಿ ಹೋರಾಡಿ ಅದರಲ್ಲಿ ಗೆದ್ದ ಸಾವಿತ್ರಿಬಾಯಿ ಪುಲೆ ಅವರ ಎಲ್ಲಾ ಸಾಧನೆಗಳನ್ನು ಗುರುತಿಸಿ ಅಂದಿನ ಬ್ರಿಟಿಷ್ ಸರಕಾರ ಅವರನ್ನು 'ಭಾರತದ ಮೊದಲ ಮಹಿಳಾ ಶಿಕ್ಷಕಿ' ಎಂದು ಕರೆದು ಗೌರವಿಸಿತು. ದೇಶದ ಮೊದಲ ಶಿಕ್ಷಕಿ ಎನ್ನುವ ಹೆಮ್ಮೆಯ ಹಾಗೂ ಶಿಕ್ಷಕ ವೃತ್ತಿಗೆ ಘನತೆಯನ್ನು ತಂದು ಕೊಟ್ಟವರು ಸಾವಿತ್ರಿಬಾಯಿ ಪುಲೆಯವರು.

1896ರಲ್ಲಿ ಪ್ಲೇಗ್ ಮಹಾಮಾರಿರೋಗ ಬಂದ ಕಾರಣ ಜನಜೀವನಅಸ್ತವ್ಯಸ್ತಗೊಂಡಿತು. ಅನೇಕ ಜನರು ಮಹಾಮಾರಿಗೆ ಬಲಿಯಾದರು. ಸಾವಿತ್ರಿ ಬಾಯಿ ಪುಲೆ ಅವರು ಹಗಲು ರಾತ್ರಿ ಎನ್ನದೆ ಸತ್ಯಶೋಧಕ ಸಮಾಜದ ಸದಸ್ಯರ ಜೊತೆ ಪ್ಲೇಗ್ ರೋಗದ ವಿರುದ್ಧ ಹೋರಾಟಕ್ಕೆ ಇಳಿಯುತ್ತಾರೆ. ಪಾಂಡುರಂಗ ಬಾಬಾಜಿ ಗಾಯಕವಾಡ ಎಂಬುವವರ ಪುತ್ರನಿಗೆ ಪ್ಲೇಗ್ ಹೆಮ್ಮಾರಿ ಆವರಿಸಿರುವುದು ಗೊತ್ತಾಗುತ್ತಿದ್ದಂತೆ ತಮ್ಮ ಜೀವದ ಹಂಗನ್ನು ತೊರೆದು ಅವನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾರೆ. ಇದರಿಂದ ಮಾತೆ ಸಾವಿತ್ರಿಬಾಯಿ ಪುಲೆ ಅವರಿಗೆ ಪ್ಲೇಗ್‌ರೋಗ ತಗುಲುತ್ತದೆ 1897 ಮಾರ್ಚ 10 ರಂದು ಮಾತೆ ಇಹಲೋಕವನ್ನು ತ್ಯಜಿಸುತ್ತಾರೆ.

ಒಟ್ಟಾರೆ ಸಾವಿತ್ರಿಬಾಯಿ ಪುಲೆ ರವರು ಎದುರಿಸಿದ ಸವಾಲುಗಳು, ಅವರು ಮಾಡಿದ ಕಾರ್ಯ ಎಲ್ಲವನ್ನು ನೆನಪಿಸಿಕೊಂಡರೆ ಅವರಿಗೆ ತಲೆಬಾಗಿ ನಮಸ್ಕರಿಸಬೇಕು ಎಂದು ಅನಿಸುತ್ತದೆ ಮತ್ತು ಅವರ ವ್ಯಕ್ತಿತ್ವ ನಮಗೆಲ್ಲರಿಗೂ ಸ್ಫೂರ್ತಿದಾಯಕ.

**ಪರಾಮರ್ಶನ ಗ್ರಂಥಗಳು**


- ಅನುಪಮಾ ಎಚ್.ಎಸ್. (2016). *ಕ್ರಾಂತಿಜ್ಯೋತಿ ಸಾವಿತ್ರಿಬಾಯಿ ಪುಲೆ.* ಲಡಾಯಿ ಪ್ರಕಾಶನ.
- ಕಾಶಿನಾಥ ಅಂಬ. (2018). *ಸಾವಿತ್ರಿಬಾಯಿ ಪುಲೆ.* ಪ್ರಗತಿ ಪ್ರಕಾಶನ.
- ನಿಂಗಣ್ಣ ಚಿ.ಸಿ. (2020). *ಸಾವಿತ್ರಿಬಾಯಿ ಪುಲೆ.* ಬುಕ್‌ಬ್ರಹ್ಮ ಪ್ರಕಾಶನ.
- ಸರಜೊಕಾಟ್ಕರ್ (2019). *ಸಾವಿತ್ರಿಬಾಯಿ ಪುಲೆ.* ಯಾಜಿ ಪ್ರಕಾಶನ.
- ವಿಜಯಲಕ್ಷ್ಮೀ ಶಿವಕುಮಾರ ಕಾಟಗೆ (2022). *ಶಿಕ್ಷಕಿ ಸಮಾಜ ಸುಧಾರಕಿ ಸಾವಿತ್ರಿಬಾಯಿ ಪುಲೆ.* ಸಪ್ನ ಬುಕ್‌ಹೌಸ್